ದಿನಾಂಕ : 20–09–2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ವಿಶೇಷ ಸರ್ಕಾರಿ ಅಭಿಯೋಜಕರವರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಬಿ.ಆರ್.ಕೆ. ವಕೀಲರಿಂದ**

ನಾನು ದ್ವಿತಿಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಕನ್ನಡ ಮಾಧ್ಯಮದಲ್ಲಿ ಓದಿದ್ದು, ನನಗೆ ಕನ್ನಡ ಓದಲು, ಬರೆಯಲು ಚೆನ್ನಾಗಿ ಬರುತ್ತದೆ. ರಾಮದುರ್ಗದ ಜುನ್ನಿ ಪೇಟೆಯಲ್ಲಿ ನಾನು ಕಿರಾಣಿ ಅಂಗಡಿಯನ್ನು ನಡೆಸುತ್ತಿದ್ದೇನೆ. ಕಳೆದ 20 ವರ್ಷಗಳಿಂದ ಈ ಅಂಗಡಿಯನ್ನು ನಮ್ಮ ತಂದೆ ನಡೆಸುತ್ತಿದ್ದು, ಈಗ ನಾನು ನೋಡಿಕೊಳ್ಳುತ್ತಿದ್ದೇನೆ ಎನ್ನುವುದು ಸರಿ. ಈ ಅಂಗಡಿಯನ್ನು ನಾನು ಮತ್ತು ನನ್ನ ಸಹೋದರ ಚಾಸಾಃ 6 ಸೇರಿ ನೋಡಿಕೊಳ್ಳುತ್ತಿದ್ದೇವೆ ಎನ್ನುವುದು ಸರಿ. ನಮ್ಮ ಕಿರಾಣಿ ಅಂಗಡಿಯಲ್ಲಿ ಬೇರೆ ಕೆಲಸಗಾರರು ಇರುವುದಿಲ್ಲ.

2. ಚಾಸಾಃ2 ಸೋಮಶೇಖರ ರಮೇಶ ಹರ್ಲಾಪೂರ, ಚಾಸಾಃ3 ಸಂಗಪ್ಪ ಮಲಕಾಜಪ್ಪ ಸಂಪಗಾಂವ ಇವರು ನನಗೆ ಗೊತ್ತಿರುತ್ತಾರೆ. ಅವರು ಸಮಾರು 10–15 ವರ್ಷಗಳಿಂದ ನನಗೆ ಗೊತ್ತಿರುತ್ತಾರೆ. ಅವರಿಬ್ಬರೂ ನಮ್ಮ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ಚಾಸಾಃ7 ಮೆಹಬೂಬ ಬಾಶಾ ಮೀಯಾಸಾಬ ಕಟಗೇರಿ ನನಗೆ ಸುಮಾರು 8–10 ವರ್ಷಗಳಿಂದ ಪರಿಚಯ ಇರುತ್ತಾರೆ.

3. ಸೊಪಡ್ಲ ಗ್ರಾಮದ ಸರ್ವೇ ನಂಬರ 153 ಮತ್ತು 154 ರಲ್ಲಿನ ಜಮೀನುಗಳನ್ನು ನಮ್ಮ ತಂದೆ 2012-13 ನೇ ಸಾಲಿನಲ್ಲಿ ವಸುಧಾ ವಸಂತ ಜೋಶಿ ಎನ್ನುವವರಿಂದ ಖರೀದಿಸಿದ್ದರು ಎನ್ನುವುದು ಸರಿ. ಎರಡೂ ಸರ್ವೇ ನಂಬರಗಳಿಂದ ಒಟ್ಟು 47 ಎಕರೆ ಜಮೀನು ಇದೆ.

4. ಸರ್ವೇ ನಂಬರ 153 ಮತ್ತು 154 ಜಮೀನುಗಳ ವಿಚಾರವಾಗಿ ನಮಗೂ ಆರೋಪಿತರಿಗೂ ಸಿವಿಲ್ ವ್ಯಾಜ್ಯ ಇತ್ತು ಎನ್ನುವುದು ಸರಿ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಮ್ಮಂತೆ ತೀರ್ಮಾನ ಆಗಿರುತ್ತದೆ.

5. ದಿನಾಂಕಃ 08-01-2018 ರಂದು ರಾಮದುರ್ಗ ಸಿವಿಲ್ ನ್ಯಾಯಾಲಯದಲ್ಲಿ OS No.5/2012 ಮತ್ತು OS No.6/2012 ನ ಮುದ್ದತ್ ಇದ್ದು, ಆ ದಿನ ನಾನು ಮತ್ತು ನನ್ನ ಚಿಕ್ಕಪ್ಪ ಮೋಟರಸೈಕಲನಲ್ಲಿ ಹೋಗಿದ್ದೇವು. ಆ ದಿನ ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

6. ರಾಮದುರ್ಗ ನ್ಯಾಯಾಲಯದಿಂದ ನಮ್ಮ ಕಿರಾಣಿ ಅಂಗಡಿ ಒಂದು ಕಿಲೋಮೀಟರ ದೂರದಲ್ಲಿದೆ. 9945874004 ಇದು ನನ್ನ ಮೊಬೈಲ ನಂಬರ ಎನ್ನುವುದು ಸರಿ. ಈ ಸಿಮ್ ನ್ನು ನಾನು ಸ್ಯಾಮಸಂಗ್ ಜೆ-7 ಗ್ಯಾಲೆಕ್ಸಿ ಮೊಬೈಲನಲ್ಲಿ ಅಳವಡಿಸಿದ್ದೇನು ಎನ್ನುವುದು ಸರಿ.

7. ದಿನಾಂಕಃ 08-01-2018 ರಂದು ರಾಮದುರ್ಗ ಸಿವಿಲ್ ನ್ಯಾಯಾಲಯದಲ್ಲಿ ಎಷ್ಟು ಸಮಯದವರೆಗೆ ಇದ್ದೇವು ಎಂದು ನನಗೆ ನೆನಪಿರುವುದಿಲ್ಲ. ಆ ದಿನ ಬೆಳಗ್ಗೆ 10:00 ಗಂಟೆಗೆ ನ್ಯಾಯಾಲಯಕ್ಕೆ ಹೋಗಿದ್ದೇನು. ನಾನು ನ್ಯಾಯಾಲಯಕ್ಕೆ ಹೋಗಿದ್ದ ಬಗ್ಗೆ ಆರ್ಡರ್ ಶೀಟ್‌ನಲ್ಲಿ ನಮೂದು ಇರುವುದಿಲ್ಲ. ನನ್ನ ಚಿಕ್ಕಪ್ಪ ಅಂಗವಿಕಲನಾಗಿದ್ದರಿಂದ ನಾನು ಅವರೊಂದಿಗೆ ಹೋಗಿದ್ದೇನು.

8. ದಿನಾಂಕಃ 08-01-2018 ರಂದು ರಾಮದುರ್ಗ ಸಿವಿಲ್ ನ್ಯಾಯಾಲಯದಲ್ಲಿ ನಾನು ನನ್ನ ತಂದೆ, ನನ್ನ ಅಣ್ಣ, ನನ್ನ ತಮ್ಮ, ನಮ್ಮ ಚಿಕ್ಕಪ್ಪ ಎಲ್ಲರೂ ಮಧ್ಯಾಹ್ನ 12:00 ಗಂಟೆಯವರೆಗೆ ಇದ್ದೇವು ಎಂದು ಸೂಚಿಸುವುದು ಸರಿಯಲ್ಲ. ರಾಮದುರ್ಗ ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಬೆಂಬಳಗಿ ಕಾಲೇಜ ಕ್ಯಾಂಪಸ್ ಇದೆ ಎನ್ನುವುದು ಸರಿ.

**ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.